ನೋಡೋಣವೆಂದು ಹೇಳಿ ಹೊರಟ.

* * *

ಅವಿನಾಶ ಬಜಾರಲ್ಲಿ ಸುತ್ತಾಡುತ್ತ ಒಂದು ಅಂಗಡಿಯೊಳಗೆ ಹೋಗುತ್ತಿದ್ದಂತೆ ಅದು ಮ್ಯೂಸಿಯಮ್ಮೇನೊ ಅನಿಸಿತು. ಲಂಬಾಣಿ ಕಸೂತಿ ಹಾಕಿದ ಚಿತ್ರಪಟಗಳ ಜೊತೆ ಹಂಪಿಯ ರಾಜವೈಭವದ ಹಲವು ಮುಖಗಳನ್ನು ಕಾಣಿಸುವ ಮಧುಬನಿ ಚಿತ್ರಪಟಗಳಿದ್ದವು. ಒಂದು ಮೂಲೆಯಲ್ಲಿ ದೊಡ್ಡದಾದ ನೀರಿನ ಬಾನಿ ಅದರ ಮೇಲೆ ಕವುಚಿಟ್ಟ ಲೋಟ. ಅದರ ಪಕ್ಕದಲ್ಲೇ ಮಹಿಳೆಯೊಬ್ಬಳು ಚಿತ್ರಪಟದ ಕೆಲಸದಲ್ಲಿ ಮಗ್ನಳಾಗಿದ್ದಳು. ಈತ ಒಳ ಹೊಕ್ಕಿದ್ದು ಆಕೆಯ ಗಮನಕ್ಕೆ ಬಂದಂತನಿಸಲಿಲ್ಲ. ಅನುಮಾನಿಸುತ್ತಿದ್ದಾಗ ಉಲ್ಲಸಿತಗೊಳಿಸುವ ಪರಿಮಳವೊಂದು ಮೂಗು ಸವರಿತು. ಹಿಂದೆಯೇ ಒಳ ಬದಿಯಿಂದ ಒಬ್ಬಾಕೆ ಬಂದಳು. ಅವಳನ್ನು ನೋಡುತ್ತಿದ್ದಂತೆ ಕ್ಷಣ ಅಪ್ರತಿಭನಾದ. ಅವಳ ನಿಲುವು... ಉಡುಗೆ... ಕೊರಳಲ್ಲಿದ್ದ ಕಲಾತ್ಮಕ ಪದರು ಮಾಲೆ ಅವಳ ಅಭಿರುಚಿಯನ್ನು ಧ್ವನಿಸುವಂತಿತ್ತು. ಮೋಡಿಗೊಳಗಾದಂತೆ ನಿಂತವನನ್ನು ಸ್ವಾಗತಿಸಿ; ಬದಿಯಲ್ಲಿದ್ದ ಕುರ್ಚಿಯೊಂದನ್ನುಅವನಿಗೆ ನೀಡಿ ತನ್ನ ಕುರ್ಚಿಯಲ್ಲಿ ಕುಳಿತಳು. ಎದುರಿನ ಮೇಜಿನ ಮೇಲೆ ನೇಮ್ ಪ್ಲೇಟ್ ಇತ್ತು. ಅದರಲ್ಲಿ ಛಾಯಾ ಬಾದಲ್ ಮಧುಬನಿ ಆರ್ಟಿಸ್ಟ್, ಸಿಇಒ, ಹೆರಿಟೇಜ್ ಫ್ಲೇವರ್ ಎಂದಿತ್ತು. ಅವನಿಗೆ ತಾನು ಅಂಗಡಿ ಬೋರ್ಡ್ ಗಮನಿಸದೆಯೇ ಒಳ ಬಂದಿದ್ದೇನೆಂದರಿವಾಯಿತು. ಅವಳೇ ನೀರು ಬೇಕೇ ಕೇಳಿದಳು. ಸುಧಾರಿಸಿಕೊಳ್ಳಬೇಕಿತ್ತು. ತಾನೇ ಎದ್ದು ಬಾನಿಯಿಂದ ನೀರು ಹಿಡಿದುಕೊಂಡ. ಆತ ನೀರು ಕುಡಿಯುತ್ತಿದ್ದಾಗ ಇನ್ನ್ಯಾರೋ ಒಳ ಬಂದರು. ಛಾಯಾ ಬಾದಲ್ 'ನಮಸ್ಕಾರ ಮೇಷ್ಟ್ರೆ' ಅನ್ನುತ್ತ ಎದ್ದು ನಿಂತಳು. ಇಷ್ಟು ಹೊತ್ತು ತಲೆ ತಗ್ಗಿಸಿ ಚಿತ್ರಪಟದ ಕೆಲಸದಲ್ಲಿ ನಿರತಳಾಗಿದ್ದ ಮಹಿಳೆ ಥಟಕ್ಕನೆ ಎದ್ದು ನಿಂತಳು. 'ಏನವ್ವಾ ಚಂದು? ನಿನ್ನ ಬಬ್ರು ಮನೆ ಕಡೆ ಬರದೆ ಮೂರು ದಿನ ಆಯ್ತು. ಎಲ್ಲೋಗಿದಾನೆ?' ನೀರು ಕುಡಿಯುತ್ತಿದ್ದ ಅವಿನಾಶನಿಗೆ ಈ ಸ್ವರ ಬಹಳ ಪರಿಚಿತ ಅನಿಸಿ ಹಿಂದಿರುಗಿ ನೋಡಿದ. ಸಾಕ್ಷಾತ್ ಸದಾನಂದ ಮೂರ್ತಿಗಳು ನಿಂತಿದ್ದರು. ಯೂಟ್ಯೂಬಲ್ಲಿ ಉಪನ್ಯಾಸ ಕೇಳಿ ಕೇಳಿ ಪರಿಚಯವಾದ ಮುಖ ಹಾಗೂ ಸ್ವರವಾಗಿದ್ದರೂ ಬೇರೆ ಸಂದರ್ಭದಲ್ಲಾದರೆ ಇತಿಹಾಸದ ಸಂಶೋಧಕ ಸದಾನಂದ ಮೂರ್ತಿಗಳನ್ನು ತಾನು ಇಷ್ಟು ಪಕ್ಕನೆ ಗುರುತಿಸುತ್ತಿರಲಿಲ್ಲ. ವೀರೇಶನಿಂದಾಗಿ ಮೂರ್ತಿಗಳು ಈಗ ಇಲ್ಲೇ ವಾಸ ಮಾಡ್ತಿದಾರೆಂಬುದು ತಿಳಿದಿದ್ದರಿಂದ ಇದು ಸಾಧ್ಯವಾಯಿತು ಎಂಬುದೂ ಹೊಳೆಯಿತು. ಬದುಕಿನ ಎಂತಹ ಅದ್ಭುತ ಸಮಯವಿದು ಅಂದುಕೊಂಡ. ನೀರಿನ ಲೋಟ ಕೆಳಗಿಟ್ಟು ಅವರೆದುರು ನಿಂತು ನಮಸ್ಕಾರ ಅಂದ. ಪ್ರತಿ ನಮಸ್ಕಾರ ಹೇಳಿದ ಮೂರ್ತಿಗಳು ಯಾರೆಂಬಂತೆ ದಿಟ್ಟಿಸಿದರು.

ಅವಿನಾಶ, ಮೂರ್ತಿಯವರಿಗೂ ಛಾಯಾ ಬಾದಲಳಿಗೂ ಒಟ್ಟಾಗಿಯೇ ತನ್ನನ್ನು ಪರಿಚಯಿಸಿ ಕೊಂಡು ತಾನು ಯುಟ್ಯೂಬಲ್ಲಿ ಮೂರ್ತಿಯವರ ಉಪನ್ಯಾಸ ಕೇಳುತ್ತಿರುವುದನ್ನು ಹೇಳಿ; ಮೂರ್ತಿಯವರ ಶಿಷ್ಯ ವೀರೇಶನ ಭೇಟಿಯನ್ನೂ ವಿವರಿಸಿದ. ಅಲ್ಲೀಗ ಆಪ್ತ ವಾತಾವರಣ ಮೂಡಿ ಬಿಟ್ಟಿತ್ತು. ಛಾಯಾ ಚಹಾ, ಬಜ್ಜಿ ತರಿಸಿದಳು. ಸದಾನಂದ ಮೂರ್ತಿ ಅಜ್ಜಂದಿರು ಮೊಮ್ಮಕ್ಕಳ ಬಳಿ ಹೇಳುವಂತೆ, 'ಆ ಯುಟ್ಯೂಬರ್ ಉಪನ್ಯಾಸ ಸರಣಿ ಮಾಡಬೇಕೆಂದಾಗ ನಾನು ಹಳಬನ ಬುದ್ಧಿ ತೋರಿಸಿ ಅವನನ್ನು ಗದರಿಸಿದ್ದೆ. ಪಾಪದ ಹುಡುಗ. ಬೆನ್ನುಬಿದ್ದ ಬೇತಾಳನ ಹಾಗೆ ಬಂದು ಮಾತಾಡಿಸಿ ರೆಕಾರ್ಡ್ ಮಾಡಿದ. ಈಗ ನೋಡಿದ್ರೆ ಅದರಿಂದಾಗಿ ನಂಗೊಬ್ಬ ಎಳೆ ದೋಸ್ತ ಸಿಕ್ಕಿದ' ಅನ್ನುತ್ತ ಅವಿನಾಶನ ಬೆನ್ನು ತಟ್ಟಿದರು.

'ಚಂದು, ನಿನ್ನ ಬಬ್ರು ಈಗ ಇಲ್ಲಿದ್ದಿದ್ದರೆ ಕುಣಿದಾಡಿ ಬಿಡುತ್ತಿದ್ದ' ಅಂದಳು ಛಾಯಾ ಬಾದಲ್. ಆದರೆ, ಚಂದುಳ ಗಮನ ಅವಿನಾಶನ ಮೇಲಿತ್ತು. ಯಾರು ಬಬ್ರು ಎಂಬಂತೆ ಅವರೆಲ್ಲರ ಮುಖ ನೋಡಿದ ಅವಿನಾಶ.

'ಅವ್ನು ಇಲ್ಲಿ ಇರದಿರುವುದೇ ಒಳ್ಳೆದಾಯ್ತು ನೋಡಿ. ಈ ಸಾರ್ ಜರ್ಮನಿಯಲ್ಲಿರುವವರಲ್ಲವಾ. ಅವರಿಗೆ ಬರ್ನಾಡು ಗೊತ್ತಿದೆಯಾ ಕೇಳ್ತೀನಿ. ಇರಿ.'

